ಮತ್ತು ಸಂಡೆಯಲ್ಲಿ ಹಾಗೂ ರಜಾ ದಿನದಲ್ಲಿ ಕೆಲಸ ಮಾಡಿದರೆ ಅದಕ್ಕೆ 14 ರೂಪಾಯಿ ಕೊಡತಕ್ಕಂಥಾದ್ದು ಇದೆ. ಹೀಗೆ ಎಂಟೈರ್ ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಒಂದೇ ಕಾನೂನು ಇದೆ. ಆ ಪ್ರಕಾರ ನಾವು ಕೊಡುತ್ತಿದ್ದೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕರ್ನಾಟಕದಲ್ಲಿ ಸೆಕೆಂಡ್ಸ್ ಮದ್ಯಪಾನದ ಮುಕ್ತ ವ್ಯಾಪಾರ

106 (727). ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೆರಿಗೆ ರಹಿತ ಮದ್ಯಮ (ಸೆಕೆಂಡ್ಸ್) ಧಾರಾಳವಾಗಿ ದೊರೆಯುತ್ತಿರುವ ಸಂಗತಿಯು ನಿಜವೆ?

ಆ) ಸೆಕೆಂಡ್ಸ್ ವ್ಯಾಪಾರದಿಂದಾಗಿ ಪ್ರತಿದಿನವೂ 2 ಕೋಟಿ ರೂ.ಗಳಷ್ಟು ಅಬಕಾರಿ ಆದಾಯವು ಕಡಿಮೆಯಾಗುತ್ತಿರುವುದು ನಿಜವೆ?

ಇ) ಸೆಕೆಂಡ್ಸ್ ವ್ಯಾಪಾರವನ್ನು ತಡೆಗಟ್ಟಲು ಸರಕಾರವು ತೆಗೆದುಕೊಂಡಿರುವ ಕ್ರಮವೇನು ಮತ್ತು ಸೆಕೆಂಡ್ಸ್ ವ್ಯಾಪಾರದ ಬಗ್ಗೆ ಸರ್ಕಾರದ ಧೋರಣೆ ಏನು?

ಈ) 30-11-89 ಮತ್ತು 10-11-90ರ ಅವಧಿಯಲ್ಲಿ ಸೆಕೆಂಡ್ಸ್ ವ್ಯಾಪಾರವು ಇಲ್ಲದಿದ್ದುದು ವಾಸ್ತವವೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಇ) ಅಬಕಾರಿ ಇಲಾಖೆಯ ಜಾರಿ ಮತ್ತು ತನಿಖೆ ವಿಭಾಗವು ಅನುಮಾನಾಸ್ಪದವಾದ ಸ್ಥಳಗಳನ್ನು ಸತತವಾಗಿ ದಾಳಿ ಮಾಡುತ್ತಿದೆ. ಅಬಕಾರಿ ಕಾಯಿದೆ ಮತ್ತು ನಿಯಮಗಳಲ್ಲಿ, ಅಬಕಾರಿ ಅಧಿಕಾರಿಗಳಿಗೆ ತಪ್ಪಿತಸ್ಥ ವಾಹನಗಳನ್ನು, ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅನುಕೂಲವಾಗುವಂತಹ ಉಪಬಂಧಗಳನ್ನು ತರಲಾಗಿದೆ. ಹಾಗೂ ಲಡೆಸಿವ್ ಚೀಟಿಗಳನ್ನು ಅಂಟಿಸುವುದನ್ನು ಕಡ್ಡಾಯ ಮಾಡಲಾಗಿದೆ. ಅತ್ಯಧಿಕ ರಾಜಾದಾಯವನ್ನು ತರುವುದೇ ಸರ್ಕಾರದ ಗುರಿ.

ಈ) ಈಗಿನಂತೆ ಆಗಲೂ ಇರಲಿಲ್ಲ.

ಮೈಸೂರು ಜಿಲ್ಲೆಯ ಪೋಲೀಸ್ ಠಾಣೆಯಲ್ಲಿ ಸಿಬ್ಬಂದಿಯ ಕೊರತೆ

114 (701). ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿರುವ ಆರಕ್ಷಕ ಸಿಬ್ಬಂದಿ ಕಡಿಮೆ ಇದ್ದು ಸಾರ್ವಜನಿಕರಿಗೆ ಸರಿಯಾದ ರಕ್ಷಣೆ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜನ ಸಂಖ್ಯೆ ಅಧಿಕವಾಗಿರುವ ಪ್ರದೇಶಗಳಲ್ಲಿ ಆರಕ್ಷಕ ಠಾಣೆಗಳನ್ನು ತೆರೆಯುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಮೈಸೂರು ಜಲ್ಲೆಯಲ್ಲಿ ಪೋಲೀಸ್ ಸಿಬ್ಬಂದಿ ಕಡಿಮೆ ಇರುವುದು ಸರ್ಕಾರಕ್ಕೆ ತಿಳಿದಿದೆ.

ಆ) ಮುಂಬರುವ 3 ವರ್ಷಗಳಲ್ಲಿ ಹೊಸದಾಗಿ 40 ಪೋಲೀಸ್ ಠಾಣೆಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆ. ಸರ್ಕಾರವು ಕಡಿಮೆ ಸಿಬ್ಬಂದಿ ಇರುವ ಪೋಲೀಸ್ ಠಾಣೆಗಳಿಗೆ ಹೆಚ್ಚಿನ ಸಿಬ್ಬಂದಿ ನೀಡುವ ವಿಷಯವನ್ನೂ